**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1357/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಮಹೇಶ** | ಪ್ರಾಸಾಃ 4 |
| ತಂದೆಯ ಹೆಸರು | | ಬಸವರಾಜು | ಚಾಸಾಃ 6 |
| ವಯಸ್ಸು | | 30 ವರ್ಷ | |
| ಕೆಲಸ | | ಶೋರೂಂ ನಲ್ಲಿ ಮೆಕ್ಯಾನಿಕ್ ಕೆಲಸ | ಸಾ ಪ್ರ ಬೋ |
| ವಾಸ | | ಹನಿಯಂಬಳ್ಳಿ | ದಿಃ 30/07/2024 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ-1 ನನ್ನ ತಂದೆ. ಚಾಸಾ4 ನನ್ನ ತಾಯಿ. ಚಾಸಾ 2, 3 ಮತ್ತು 5 ಗೊತ್ತು. ಆರೋಪಿತರು ಗೊತ್ತು. ದಿಃ 16.06.2015 ರಂದು ಬೆಳಿಗ್ಗೆ 7 ಗಂಟೆಗೆ ಹನಿಯಂಬಳ್ಳಿ ಗ್ರಾಮದ ನಮ್ಮ ನಿವೇಶನಕ್ಕೆ ಬಚ್ಚಲುಮನೆಯ ನೀರನ್ನು ಆರೋಪಿತರು ಬಿಡುತ್ತಿದ್ದು, ನನ್ನ ತಂದೆ ಚಾಸಾ 1 ರವರು ನ್ಯಾಯಾಲಯದಲ್ಲಿ ಪ್ರಕರಣವಿದ್ದು, ಅದು ತೀರ್ಮಾನ ವಾಗುವವರೆಗೂ ಬಚ್ಚಲು ಮನೆಯ ನೀರನ್ನು ಬಿಡಬೇಡಿ ಎಂದು ನನ್ನ ತಂದೆ ಆರೋಪಿತರಿಗೆ ಹೇಳಿದ್ದಕ್ಕೆ ಆರೋಪಿತರು ನನ್ನ ತಂದೆಗೆ ಬೋಳಿಮಗನೇ ಸೂಳೇಮಗನೇ ಎಂದು ಬೈದು ನನ್ನ ತಂದೆ ಮತ್ತು ತಾಯಿಗೆ ಹೊಡೆದಿರುತ್ತಾರೆ. ನಾನು ಮನೆಯಲ್ಲಿದ್ದವನು ಗಲಾಟೆಯ ಶಬ್ದ ಕೇಳಿ ಆಚೆ ಬಂದಾಗ ನನ್ನ ತಂದೆ ಬಿದ್ದು ಹೋಗಿದ್ದು, ನಾನು ಬಂದು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆರೋಪಿತರು ನಾನು ನನ್ನ ತಂದೆ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಮ್ಮನ್ನು ಅಡ್ಡಗಟ್ಟಿ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. ಘಟನೆಯ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರಿಂದ:

ನನ್ನ ತಂದೆ ಮತ್ತು 1 ನೇ ಆರೋಪಿಯ ನಡುವೆ ಸಿವಿಲ್ ದಾವೆ ನಡೆಯುತ್ತಿತ್ತು ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ಆರೋಪಿತರು ನನ್ನ ತಂದೆಗೆ ಬೈದಿಲ್ಲ, ನನ್ನ ತಂದೆ ತಾಯಿಗೆ

ಹೊಡೆದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 3 ದಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ಆರೋಪಿತರ ವಿರುದ್ದದ ದ್ವೇಷದ ಕಾರಣಕ್ಕಾಗಿ ಮತ್ತು ಸಿವಿಲ್ ದಾವೆ ಇದ್ದ ಕಾರಣ ಅವರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**ಸಹಿ/-**

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**